**ಓ ಎಸ್ ನಂಃ 11/2015**

**ಡಿ. ಡಬ್ಲ್ಯೂ ಃ 2**

**ದಿಃ 16.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಎನ್ ಕೆ ಎನ್ ವಕೀಲರಿಂದ**

ನಮ್ಮ ತಂದೆ ತೀರಿಕೊಂಡಾಗ ನನಗೆ 6 ವರ್ಷ ವಯಸ್ಸಿತ್ತು. ನನ್ನ ಜನ್ಮ ದಿನಾಂಕ ಃ 7.05.1985 ಇರುತ್ತದೆ. ಎಂ ಆರ್ ಐ ಹೆಚ್ ಸಿ 1/1991-92 ಆದಾಗ ನನಗೆ 6 ವರ್ಷ ವಯಸ್ಸಿತ್ತು. ಆ ಸಮಯದಲ್ಲಿ ಸದರಿ ಎಂ ಆರ್ ಯಾವ ಸ.ನಂ.ಗೆ ಆಗಿತ್ತು, ಯಾರ ಹೆಸರಿಗೆ ಆಗಿತ್ತು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ. ನಂತರ ಅದನ್ನು ಓದಿ ತಿಳಿದುಕೊಂಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಎಂ ಆರ್ ನಲ್ಲಿ ನಮ್ಮ ತಂದೆಗೆ ಮತ್ತು ವಾದಿಗೆ ಭಾಗವಾದ ಬಗ್ಗೆ ಬರೆದಿಲ್ಲ ಎಂದರೆ ಸರಿ. ಅದು ಪೌತಿ ಖಾತೆ ಆಧಾರದ ಮೇಲೆ ಮಾಡಿದ ಮ್ಯುಟೇಷನ್ ಆಗಿದೆ. ಸದರಿ ಮ್ಯುಟೇಷನ್ ವಿಭಾಗದ ಆಧಾರದಲ್ಲಿ ಆಗಿಲ್ಲ ಎಂದರೆ ಸರಿ. ಎಂ ಆರ್ 1/1992-93 ಇದು ಸಹ ವಿಭಾಗದ ಆಧಾರದ ಮೇಲೆ ಆಗಿಲ್ಲ ಎಂದರೆ ಸರಿ.

ನಿ ಡಿ 21 ರಿಂದ ನಿ ಡಿ 25 ಇವುಗಳು ವಿಭಾಗಪತ್ರದ ಆಧಾರದಲ್ಲಿ ಆಗಿಲ್ಲ ಎಂದರೆ ಸರಿ. 1981-82 ರಲ್ಲಿ ವಿಭಾಗವಾಗಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಿ ಡಿ 31 ರ ಪ್ರಕಾರ ಯಾವುದೆ ಖಾತೆಗಳು ಆಗಿಲ್ಲ ಎಂದರೆ ಸರಿ. ಆದರೆ ವಿಭಾಗಪತ್ರ ಮಾಡಿಕೊಳ್ಳುವ ಮೊದಲೇ ಖಾತೆಗಳು ಆಗಿದ್ದವು. ದಾಖಲಾತಿಗಾಗಿ ಆ ಪತ್ರ ಮಾಡಿಕೊಂಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾತ ಇದ್ದಾಗಲೇ ಮೌಖಿಕವಾಗಿ ಭಾಗವಾಗಿತ್ತು ಆ ಪ್ರಕಾರ ಖಾತೆಗಳು ಆಗಿದ್ದವು ಎಂದು ಸಾಕ್ಷಿ ಹೇಳುತ್ತಾರೆ. 1982-83 ಕ್ಕಿಂತ ಮುಂಚೆ ಆದ ಮೌಖಿಕ ವಿಭಾಗದ ದಾಖಲೆಗಳನ್ನು ನೋಡಿ ಹೇಳುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಡಿ 19 ಆ ರೀತಿ ಮೌಖಿಕವಾಗಿ ವಿಭಾಗವಾದ ದಾಖಲೆ ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಡಿ 19 ರಲ್ಲಿ ಭಾಗವಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. **ಸಾಕ್ಷಿಗೆ ಎರಡು ನೆರಳಚ್ಚು ಪ್ರತಿಗಳನ್ನು ತೋರಿಸಿ ಅವುಗಳು ನಿ ಡಿ 19 ರ ಪ್ರತಿಗಳು ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ.**

ನಿ ಡಿ 31 ಇದು ಒಂದು ಸೃಷ್ಟಿ ಮಾಡಿದ ವಿಭಾಗಪತ್ರ ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ನಮ್ಮ ತಾಯಿಯಾಗಲಿ ವಾದಿಗಳಾಗಲಿ ಅಥವಾ ಪ್ರತಿವಾದಿ 1 ಮತ್ತು 2 ರವರಾಗಲಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಿ ಡಿ 31 ಕ್ಕೆ ಸಾಕ್ಷಿದಾರರಾಗಿ ನಮ್ಮ ಊರಿನವರಾದ ಪರಮಶಿವಯ್ಯ, ಎ ಮುನಿಯಪ್ಪ ಇದ್ದರು. ಅದಕ್ಕೆ ನಮ್ಮ ತಾಯಿ, ನಮ್ಮ ಚಿಕ್ಕ ಅಜ್ಜಿ, ವಾದಿಗಳು , ಪ್ರತಿವಾದಿ 1 ಮತ್ತು

2 ರವರು ಸಹಿ ಮಾಡಿದ್ದಾರೆ. ನಿ ಡಿ 31 ರಂತೆ ಯಾವುದೆ ಪಾರಿಕತ್ ಆಗಿಲ್ಲ ಎಂದರೆ ಸರಿಯಲ್ಲ. ನಿಡಿ 31 ನೈಜ ದಾಖಲೆಯಾಗಿದ್ದರೆ ಆ ಪ್ರಕಾರ ಖಾತೆ ಮಾಡಿಸಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ರಮೇಶ್ ರವರು ಕ್ರಯಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿದ್ದರಿಂದ ದಾಖಲೆ ತೆಗೆದುಕೊಳ್ಳುವ ಮೊದಲು ಪ್ರತಿವಾದಿ 1 ಮತ್ತು 2 ರವರು ಎಲ್ಲರನ್ನು ಕರೆದುಕೊಂಡು ಬಂದು ಪಾರಿಕತ್ ಮಾಡಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಯಲಚುಗುಪ್ಪೆ ಗ್ರಾಮದ ಸ.ನಂ. 213 ರಲ್ಲಿ 33 ಗುಂಟೆಯನ್ನು ಪ್ರತಿವಾದಿ 1 ಮತ್ತು 2 ರವರು ಮಾರಾಟ ಮಾಡಿದ್ದರು, ಆ ಸಂದರ್ಭದಲ್ಲಿ ರಮೇಶ್ ಒತ್ತಾಯ ಮಾಡಿದ್ದರಿಂದ ನಿ ಡಿ 31 ನ್ನು ಮಾಡಿಕೊಂಡಿದ್ದಾರೆ. ನಮ್ಮ ಭಾಗ 33 ಗುಂಟೆ ಹಾಗೆ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೋ ಇಲ್ಲವೊ ಎಂದು ನೆನಪಿಲ್ಲ. ಈ ವಿಷಯವನ್ನು ನನ್ನ ತಕರಾರಿನಲ್ಲಿ ಬರೆಯಿಸಿದ್ದೇನೋ ಇಲ್ಲವೋ ಎಂದು ನೆನಪಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಎನ್ ಕೆ ಎನ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**